# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12-10-2020.

## ಆದೇಶ

1. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿರ್ದೇಶನಗಳನ್ನು ಅನುಸರಿಸಿ, ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-ಐ(ಎ), ದಿನಾಂಕ:30.09.2020ರಲ್ಲಿ ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಮರುತೆರೆಯಲು ಹಾಗೂ ಕಂಟೈನ್‌ಮೆಂಟ್ ವಲಯಗಳಲ್ಲಿ ಲಾಕ್‌ಡೌನ್ ಅವಧಿಯನ್ನು ದಿನಾಂಕ:31.10.2020ರ ವರೆಗೆ ವಿಸ್ತರಿಸಲು **ಮರುತೆರವು** ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದರಂತೆ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್ಆರ್ 2020 ದಿನಾಂಕ:01.10.2020ರಲ್ಲಿ ಕಂಟೈನ್‌ಮೆಂಟ್ ವಲಯಗಳಲ್ಲಿ ಲಾಕ್‌ಡೌನ್ ಅವಧಿಯನ್ನು ವಿಸ್ತರಿಸಿ ಮತ್ತು ಕಂಟೈನ್‌ಮೆಂಟ್ ಹೊರಗಿನ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಪುನರಾರಂಭಿಸಲು **ಮರುತೆರವು** ಮಾರ್ಗಸೂಚಿಗಳನ್ನು ಹೊರಡಿಸಿದೆ. ಇವುಗಳು ದಿನಾಂಕ:31.10.2020ರವರೆಗೆ ಜಾರಿಯಲ್ಲಿರುತ್ತವೆ.

2. ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಉಲ್ಬಣಗೊಳ್ಳುತ್ತಿರುವುದರಿಂದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುತ್ತೋಲೆ ಸಂಖ್ಯೆ: HFW 225 ACS 2020, ದಿನಾಂಕ:15.07.2020ರಲ್ಲಿ ಸರ್ಕಾರ ನಿಗದಿಪಡಿಸಿರುವ ದರದಂತೆ ರೋಗಿಗಳಿಗೆ ಶೇಕಡ 50ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಆದೇಶಿಸಿದೆ.

3. ಖಾಸಗಿ ವೈದ್ಯಕೀಯ ಸಂಸ್ಥೆಗಳು ಹಾಸಿಗೆಗಳನ್ನು ಮೀಸಲಿರಿಸುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಸುತ್ತೋಲೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳುವ ಸಲುವಾಗಿ ಮೈಸೂರು ಜಿಲ್ಲೆಯಲ್ಲಿನ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳ ತಂಡವನ್ನು ರಚಿಸಿರುತ್ತೇನೆ:

| ಕ್ರ.ಸಂ | ಅಧಿಕಾರಿಗಳ ತಂಡ | ಕಾರ್ಯವ್ಯಾಪ್ತಿ |
|---|---|---|
| 1 | ಡಾ. ಎನ್. ಮಂಜುಳಾ, ಭಾ.ಆ.ಸೇ | ಮೈಸೂರು ಜಿಲ್ಲೆ. |
| 2 | ಡಾ. ರವೀಂದ್ರನಾಥ್, ಭಾ.ಪೊ.ಸೇ | |

4. ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ 69ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾದ ಈ ಕೆಳಗೆ ಸಹಿ ಮಾಡಿರುವ ನಾನು ಮೇಲ್ಕಂಡ ಅಧಿಕಾರಿಗಳಿಗೆ ವಹಿಸಲಾದ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಅಧಿಕಾರಿಗಳಿಗೆ ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ 22ರ ಸಬ್ ಸೆಕ್ಷನ್ (2), ಖಂಡ(ಹೆಚ್) ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ಮತ್ತು ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ 24ರ ಖಂಡ (ಎಫ್), (ಹೆಚ್), (ಜೆ) ಮತ್ತು (ಎಲ್) ಅಡಿಯಲ್ಲಿ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಈ ಮೂಲಕ ಪ್ರತ್ಯಾಯೋಜಿಸಿರುತ್ತೇನೆ.

...2

i. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಅಥವಾ ಅವರಿಂದ ಅಧಿಕಾರ ಹೊಂದಿರುವಂತಹ ಯಾವುದೇ ಅಧಿಕಾರಿಗಳು ರೋಗಿಗಳನ್ನು ಸರ್ಕಾರದ ಕೋಟಾದ ಅಡಿಯಲ್ಲಿ ದಾಖಲಿಸಲು ನಿರ್ದೇಶಿಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ii. ಕೋವಿಡ್-19 ರೋಗಿಗಳ ದಾಖಲೆ ಹಾಗೂ ಬಿಡುಗಡೆಯನ್ನು ಆಸ್ಪತ್ರೆಗಳಲ್ಲಿ ಜಿಲ್ಲಾಡಳಿತ ಮತ್ತು SAST ಒದಗಿಸಿರುವಂತಹ ಆಸ್ಪತ್ರೆ ಹಾಸಿಗೆ ನಿರ್ವಹಣೆ ಪೋರ್ಟಲ್ ಮುಖಾಂತರ ಸರ್ಕಾರದ ಕೋಟಾದಲ್ಲಿ ಮೀಸಲಿರಿಸಿರುವ ಹಾಸಿಗೆಗಳನ್ನು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯ ಆಡಳಿತದಲ್ಲಿನ ಖಾಸಗಿ ಹಾಸಿಗೆಗಳನ್ನು ನಿರ್ವಹಿಸತಕ್ಕದ್ದು.

iii. ದಿನಾಂಕ:15.07.2020ರ ಅಧಿಸೂಚನೆಯಲ್ಲಿನ ನಿರ್ದೇಶನದಂತೆ ಸರ್ಕಾರಕ್ಕೆ ನಿಗದಿಪಡಿಸಿರುವ ಹಾಸಿಗೆಗಳ ವರದಿ, ರೋಗಿಗಳ ದಾಖಲಾತಿ ಭರ್ತಿ ಹಾಗೂ ಹಾಸಿಗೆಗಳ ಲಭ್ಯತೆಯನ್ನು ಹಾಸಿಗೆ ಹಂಚಿಕೆ ಫಲಕದಲ್ಲಿ ಪ್ರದರ್ಶಿಸುವುದು. ಅಂತೆಯೇ, ಸರ್ಕಾರದಿಂದ ಶಿಫಾರಸ್ಸುಗೊಳ್ಳದೇ ಕೋವಿಡ್-19 ರೋಗಿಗಳಿಗೆ ಮೀಸಲಿರುವಂತಹ ಹಾಸಿಗೆಗಳನ್ನು ಸಹ ಇದೇ ಮಾದರಿಯಲ್ಲಿ ಫಲಕದಲ್ಲಿ ಪ್ರದರ್ಶಿಸುವುದು.

iv. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ದೇಶಿಸಿರುವಂತೆ, ಅಂತಹ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳುವುದಕ್ಕೆ ವಿಫಲವಾದ ಬಗ್ಗೆ, ರೋಗಿ ಅಥವಾ ಆತನ ಬಂಧುಗಳು ತಮ್ಮ ದೂರುಗಳನ್ನು ಯಾರಿಗೆ ದಾಖಲಿಸಬಹುದೋ ಅಂತಹ ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಮತ್ತು ಇತರೆ ಅಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ಪ್ರದರ್ಶಿಸಬೇಕು.

v. ಆಸ್ಪತ್ರೆಗಳಲ್ಲಿ ಮುಖ್ಯವಾಗಿ ಸಾಧಾರಣವಾಗಿ ಮತ್ತು ಗಂಭೀರವಾಗಿ ಖಾಯಿಲೆಗೆ ತುತ್ತಾದ ರೋಗಿಗಳನ್ನು ದಾಖಲಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಲಹೆ ಸಂಖ್ಯೆ: ಸಿಒಎಂ/ಹೆಚ್‌ಎಫ್‌ಡಬ್ಲೂ/ಪಿಎಸ್/2020, ದಿನಾಂಕ:18.07.2020 ರ ಆದೇಶಕ್ಕೆ ಆಸ್ಪತ್ರೆಗಳು ಬದ್ಧವಾಗಿರಬೇಕು ಮತ್ತು ಅವು ರೋಗಲಕ್ಷಣ ರಹಿತ ಕೋವಿಡ್-19 ರೋಗಿಗಳನ್ನು ದಾಖಲಿಸಿಕೊಂಡು, ಸಾಧಾರಣ ಮತ್ತು ಗಂಭೀರವಾದ ರೋಗ ಲಕ್ಷಣಗಳುಳ್ಳ ಕೋವಿಡ್ ರೋಗಿಗಳಿಗೆ ಅಗತ್ಯವಾದ ಹಾಸಿಗೆಗಳನ್ನು ಬ್ಲಾಕ್ ಮಾಡಬಾರದು.

ಟಿಎಂವಿಜಯಭಾಸ್ಕರ್ 2/10/20
**(ಟಿ.ಎಂ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.